ಕರ್ನಾಟಕ ವಿಧಾನ ಸಭೆ

ಮಂಗಳವಾರ 21ನೇ ಫೆಬ್ರವರಿ 1984

ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ 9 ಗಂಟೆಗೆ ಸದನವು ಸಮಾವೇಶಗೊಂಡಿತು.

ಅಧ್ಯಕ್ಷರು.—(ಶ್ರೀ ಡಿ. ಚಂದ್ರೇಗೌಡ) ಪೀಠವನ್ನು ಅಲಂಕರಿಸಿದ್ದರು.)

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ನೀಡಲಾದ ಬಾಯಿ ಮಾತಿನ ಉತ್ತರಗಳು.

ಕುಂದಾಪುರ ತಾಲ್ಲೂಕಿನ ಕೋಡಿ ಮಾಣೂರು ರಸ್ತೆ ಅಭಿವೃದ್ಧಿ ಕುರಿತು.

ಶ್ರೀ ಪ್ರತಾಪ ಚಂದ್ರಶೆಟ್ಟಿ (ಕುಂದಾಪುರ).—ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಸಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಕುಂದಾಪುರ ತಾಲ್ಲೂಕಿನ ಸಮುದ್ರ ತೀರದಲ್ಲಿ ಕೋಡಿ ಮಾಣೂರು ರಸ್ತೆ ವಾಹನ ಸಂಚಾರಕ್ಕೆ ಯೋಗ್ಯವಾಗಿಲ್ಲವೆಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ;

ಆ) ಈ ಹಿಂದೆ ಈ ರಸ್ತೆಯನ್ನು ಮಾಡುವ ಅಗತ್ಯತೆ ಸರ್ಕಾರಕ್ಕೆ ಇದ್ದೀತೇ ;

ಇ) ಈ ರಸ್ತೆಯು ವಾಹನ ಸಂಚಾರಕ್ಕೆ ಯೋಗ್ಯವಾಗಿಲ್ಲದ ಕಾರಣ ವಾಹನ ಸಂಚಾರ ನಿಂತಿದ್ದರಿಂದ ಬಡ ಮೀನುಗಾರರಿಗೆ ಅದರಲ್ಲಿ ವಿಶೇಷವಾಗಿ ಮೀನುಗಳನ್ನು ಮಾರಾಟ ಮಾಡುವ ಮಹಿಳೆಯರಿಗೆ ತೊಂದರೆಯಾಗುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಈ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದವರು ಕೈಗೊಂಡ ಕ್ರಮವೇನು ?

ಶ್ರೀ ಹೆಚ್. ಡಿ ದೇವೇಗೌಡ (ಲೋಕೋಪಯೋಗಿ ಹಾಗೂ ನೀರಾವರಿ ಸಚಿವರು).—ಅ) ಇಲ್ಲ. ಈ ರಸ್ತೆ ವಾಹನ ಸಂಚಾರಕ್ಕೆ ಯೋಗ್ಯವಾಗಿದೆ.

ಆ) ಇತ್ತು.

ಇ) ಮೇಲಿನ (ಅ) ಪ್ರಶ್ನೆಯ ಉತ್ತರದಿಂದಾಗಿ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಈ) ಈ ರಸ್ತೆಯನ್ನು ವಾಹನ ಸಂಚಾರಕ್ಕೆ ಯೋಗ್ಯವಾದ ರೀತಿಯಲ್ಲಿ ಹಣಕಾಸು ಪರಿಸ್ಥಿತಿಯನ್ನವಲಂಬಿಸಿ ನಿರ್ವಹಿಸಲಾಗುತ್ತಿದೆ. ಅಧ್ಯಕ್ಷರೇ, ಈ ರಸ್ತೆಯಿಂದ ವಾಹನ ಸಂಚಾರಕ್ಕೆ ಏನೂ ತೊಂದರೆಯಾಗಿಲ್ಲ. ಸ್ವಲ್ಪ ಸ್ಕ್ವರ್ಸ್ ಆಗಿದೆ. ಆಷ್ಟು ಸ್ಕ್ವರ್ಸ್ ಮುಚ್ಚಬೇಕಾದರೆ ಒಂದು ಲಕ್ಷರೂಪಾಯಿಗೆ ಮೇಲ್ಪಟ್ಟು ಬೇಕಾಗುತ್ತದೆ. ಅದಕ್ಕೆ ಎಸ್. ಆರ್ ನಲ್ಲಿ ಹಣ ಒದಗಿಸಿ ಮಾಡಿಸಲಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಪ್ರತಾಪಚಂದ್ರ ಶೆಟ್ಟಿ —ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಅಲ್ಲಿ ವಾಹನ ಸಂಚಾರ ಇದೆ ಎಂದು ಹೇಳುತ್ತಿದ್ದಾರೆ. ಅಲ್ಲಿ ಬಡ ಮೀನುಗಾರರು ಮೀನು ಹೊತ್ತುಕೊಂಡು ಹೋಗಲಿಕ್ಕೆ ಕಷ್ಟವಾಗುತ್ತದೆ. ಮೀನು ಸಾಗಿಸುವಂಥ ಟಿಂಪೋಗಳು, ಲಾರಿಗಳು ಅಲ್ಲಿ ಹೋಗುತ್ತಿಲ್ಲ. ಅಲ್ಲದೆ, ಆ ರಸ್ತೆಗಳಲ್ಲಿ ಕಲ್ಲುಗಳು, ಬೋರೆಡರ್ಸ್‌ಗಳಿಂದ ತುಂಬಿರುವುದರಿಂದ ಓಡಾಡಲಿಕ್ಕೆ ಬಹಳ ಕಷ್ಟ ಇದೆ. ಇದರ ಬಗ್ಗೆ ಮಾನ್ಯ ಮಂತ್ರಿಗಳು ಏನು ಉತ್ತರ ಹೇಳುತ್ತಾರೆ ತಿಳಿಸಬೇಕು.

ಅಧ್ಯಕ್ಷರು.—ಹಣ ಒದಗಿಸಿ ಸರಿಪಡಿಸಲಿಕ್ಕೆ ಪ್ರಯತ್ನ ಮಾಡೆತ್ತೇವೆಂದು ಮಾನ್ಯ ಮಂತ್ರಿಗಳು ಈಗಾಗಲೇ ಹೇಳಿದ್ದಾರೆ.

ಶ್ರೀ ಪ್ರತಾಪಚಂದ್ರ ಶೆಟ್ಟಿ.—ಅಧ್ಯಕ್ಷರೇ, ಅಲ್ಲಿ ಸ್ಕ್ವರ್ಸ್ ಮೈನ್‌ಟಿನ್ಸ್ ಮಾಡಿಲ್ಲ.

ಶ್ರೀ ಹೆಚ್. ಡಿ ದೇವೇಗೌಡ —ನನ್ನ ಹತ್ತಿರ ರಿಪೋರ್ಟ್ ಇದೆ. ಫಿಷರ್‌ಮೆನ್‌ಗೆ ಅನುಕೂಲ ಮಾಡಲಿಕ್ಕೆ ಮಾಡಿರುವುದು ಟ್ರಾಫಿಕ್‌ಗೆಏನೂ ತೊಂದರೆಯಿಲ್ಲ ಹೆಚ್ಚು ಮಳೆ ಆದರೆ ಆ ಕಡೆ. ಈ ಕಡೆ ಸ್ಕ್ವರ್ಸ್ ಆಗುತ್ತದೆ. ಅದು 2-4 ಕಿಲೋಮೀಟರ್ ರಸ್ತೆ ಇದೆ. ಆ ಸ್ಕ್ವರ್ಸ್ ಮುಚ್ಚಲಿಕ್ಕೆ ಹಣ ಬೇಕಾದರೆ ಕೊಟ್ಟು ಮಾಡಿಸುತ್ತೇನೆ.

ಶ್ರೀ ಪ್ರತಾಪ ಚಂದ್ರ ಶೆಟ್ಟಿ.—ಅಧ್ಯಕ್ಷರೆ, ಆ ರಸ್ತೆ ನಡೆದು ಹೋಗುವಂಥ ಪರಿಸ್ಥಿತಿಯಲ್ಲಿ ಇಲ್ಲ. ಮೈನ್ ರೋಡ್‌ನಲ್ಲಿ ಹೋಗಲಿಕ್ಕೆ ಆಗುವುದಿಲ್ಲ. ಅಲ್ಲಿ ಟಿಂಪೋ ಮೆಟಡಾರ್ ವ್ಯಾನ್ಸ್ ಕೂಡ ಹೋಗುತ್ತಿಲ್ಲ. ಜನರು ನಡೆದುಕೊಂಡು ಹೋಗುವುದು ಬಹಳ ಕಷ್ಟ ಇದೆ.

ಅಧ್ಯಕ್ಷರು.—ಈ ಸಾರಿ ಏನಾದರೂ ಪ್ರಯತ್ನ ಮಾಡಿ ಮಾಡಿಸೋಣ ಎಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ.

ಡಣಾಯಕನ ಕೆರೆಯ ನೀರಾವರಿ ಯೋಜನೆಯ ಮಂಜೂರಾತಿ

271 (329) ಶ್ರೀ ಕೆ ಚೆನ್ನಬಸವನಗೌಡ (ಕೊಡಿಗ್ಲಿ).-- ಮಾನ್ಯ ಸಣ್ಣ ನೀರಾವರಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:--

ಅ) ಡಣಾಯಕನಪುರದ ಹತ್ತಿರ ನಿಂತಿರುವ ತುಂಗಭದ್ರಾ ಜಲಾಶಯದ ನೀರನ್ನು ಡಣಾಯಕನ ಕೆರೆಗೆ ಲಿಫ್ಟ್ ಮಾಡುವುದರಿಂದ ಅಲ್ಲಿ ಅಚ್ಚು ಕಟ್ಟು ದಾರರಿಗೆ ಹೆಚ್ಚಿನ ಪ್ರಯೋಜನವಾಗುವುದೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಹಾಗಿದ್ದಲ್ಲಿ ಸದರಿ ಯೋಜನೆಯನ್ನು ಸರ್ಕಾರದವರು ಜರೂರಾಗಿ ಕಾರ್ಯಗತ ಮಾಡುವರೇ ;

ಇ) ಮೇಲಿನ ಯೋಜನೆಯನ್ನು ಕೈಗೊಳ್ಳುವುದರಿಂದ ಕೆರೆಯು ತುಂಬಿ ಯಾವಗಲೂ 1,200 ರಿಂದ 2,000 ಎಕರೆ ಅಚ್ಚು ಕಟ್ಟುದಾರರಿಗೆ ಹೆಚ್ಚು ಪ್ರಯೋಜನವಾಗುವುದೆಂಬ ವಿಷಯ ಸರ್ಕಾರದವರ ಗಮನಕ್ಕೆ ಬಂದಿಲ್ಲವೇ ?

ಶ್ರೀ ಆರ್. ಎನ್. ಲಕ್ಷ್ಮೀಪತಿ (ಸಣ್ಣ ನೀರಾವರಿ ರಾಜ್ಯ ಸಚಿವರು).-- ಅ) ಹೌದು.

ಆ) ಪರಿಶೀಲನೆಯಲ್ಲಿದೆ.

ಇ) ಪರಿಶೀಲನೆಯಲ್ಲಿದೆ.

ಶ್ರೀ ಕೆ. ಚೆನ್ನಬಸವನಗೌಡ.-- ಮಾನ್ಯ ಅಧ್ಯಕ್ಷರೆ, ಸುಮಾರು 10 ವರ್ಷಗಳಿಂದಲೂ ಈ ಕೆಲಸ ಆಗದೇ ಹಾಗೇ ಪೆಂಡಿಂಗನಲ್ಲಿದೆ ಪ್ರತಿ ಸಾರಿಯೂ ಇದು ಪರಿಶೀಲನೆಯಲ್ಲಿದೆ ಎಂದು ಹೇಳಿಕೊಂಡು ಬಂದಿದ್ದಾರೆ. ಪರಿಶೀಲನೆಯಲ್ಲಿದೆ ಎಂದು ಹೇಳಿದರೆ ಅದನ್ನು ಯಾವಾಗ ಕಾರ್ಯಗತ ಮಾಡುತ್ತೀರಿ ಎಂಬುದನ್ನು ಸ್ಪಷ್ಟವಾಗಿ ಹೇಳಬೇಕು

ಶ್ರೀ ಆರ್. ಎನ್. ಲಕ್ಷ್ಮೀಪತಿ.---ಮೂರನೇ ಹಂತದ ವ್ಯಾಸನ ಕೆರೆ ಯೋಜನೆಯಿಂದ ಡಣಾಯಕನ ಕೆರೆಗೆ ನೀರು ತುಂಬಬೇಕು ಎಂಬ ಯೋಜನೆ ಇತ್ತು. ಆದರೆ ಗ್ರಾಮಸ್ಥರು ಸ್ವತಂತ್ರವಾಗಿ ನಮಗೆ ಏತ ನೀರಾವರಿ ಮಾಡಿ ನಂತರ ಕೆರೆ ತುಂಬುವುದಕ್ಕೆ ಏರ್ಪಾಡು ಮಾಡಿ ಎಂದು ಅರ್ಜಿ ಕೊಟ್ಟಿದ್ದಾರೆ ಈ ವಿಚಾರ ಸರ್ಕಾರದ ಪರಿಶೀಲನೆಯಲ್ಲಿದೆ. ಈ ಕೆಲಸಕ್ಕೆ 23 ಲಕ್ಷ ರೂಪಾಯಿ ಆಗುತ್ತದೆ ಹೀಗೆ ಮಾಡಿದರೆ ಎರಡು ಬೆಳೆ ತೆಗೆಯುವುದಕ್ಕೆ ಅವಕಾಶವಿದೆ. ಇದನ್ನು ಅಪ್ರೈಸಲ್ ಕಮಿಟಿಯವರು ಒಪ್ಪಬೇಕಾಗುತ್ತದೆ. 10 ಲಕ್ಷ ರೂಪಾಯಿಗಳಿಗಿಂತ ಹೆಚ್ಚು ಖರ್ಚಾಗುವ ಕೆಲಸಗಳಾದರೆ ಆ ಕಮಿಟಿ ಮುಂದೆ ಹೋಗಬೇಕು. ಅವರು ಒಪ್ಪಿಗೆ ಕೊಟ್ಟರೆ ಈ ಕೆಲಸವನ್ನು ಕಾರ್ಯಗತ ಮಾಡುತ್ತೇವೆ.

ಶ್ರೀ ಕೆ ಚೆನ್ನಬಸವನಗೌಡ.-- ಮೂರನೇ ಹಂತದ ವ್ಯಾಸನ ಕೆರೆ ಯೋಜನೆ ಬಿಟ್ಟು ಇದು ಸಮೀಪವಾಗುವುದರಿಂದ ಇಲ್ಲಿಂದಲೇ ಮಾಡಬೇಕು ಎಂದು ಮಾಡಿರುವುದು ಯೋಗ್ಯವಾದುದು. ವ್ಯಾಸನಕೆರೆ ಎರಡನೇ ಹಂತದ ಕೆಲಸ ಇನ್ನೂ ಕಾರ್ಯಗತವಾಗಿಲ್ಲ. ಆ ಕೆಲಸ ಇನ್ನೂ ಪೂರ್ತಿಯಾಗಬೇಕಾಗಿದೆ. ಕಾಲುವೆಯನ್ನು ಎತ್ತರ ಮಾಡಿದರೆ ನೀರಾವರಿಗೆ ಬಹಳ ಅನುಕೂಲವಾಗುತ್ತದೆ. ಎರಡನೇ ಹಂತದ ವ್ಯಾಸನಕೆರೆ ಕೆಲಸವನ್ನು ಬೇಗ ಮಾಡಿ ಕಾಲುವೆ ಎತ್ತರ ಮಾಡುವ ಕೆಲಸವನ್ನು ಮಾಡುತ್ತೀರಾ ?

ಶ್ರೀ ಆರ್. ಎನ್. ಲಕ್ಷ್ಮೀಪತಿ.-- ಎರಡನೇ ಹಂತದ ಕಾರ್ಯ ಸಂಪೂರ್ಣವಾಗಿ ಆಗಿದೆ. ಈ ತಿಂಗಳ ಕೊನೆಯಲ್ಲಿ ನೀರು ಕೊಡುವುದಕ್ಕೆ ಸಾಧ್ಯವಾಗುತ್ತದೆ. ಕಾಲುವೆ ವಿಚಾರದಲ್ಲಿ ಅನಾನೂಕೂಲತೆ ಇದ್ದರೆ ಸರಿಪಡಿಸುತ್ತೇವೆ.

ಪ್ರಶ್ನೆ ಸಂಖ್ಯೆ : 275 (432)

ಸದಸ್ಯರು ಹಾಜರಿರಲಿಲ್ಲ.

ಕೊಡಗು ಜಿಲ್ಲೆಯಲ್ಲಿರುವ ಏಲಕ್ಕಿತೋಟ ವಿಸ್ತೀರ್ಣ

273 (522) ಶ್ರೀ ಎಂ. ಎಂ. ನಾಣಯ್ಯ (ಮಡಿಕೇರಿ).-- ಮಾನ್ಯ ಅರಣ್ಯ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:--

ಅ) ಕೊಡಗು ಜಿಲ್ಲೆಯಲ್ಲಿರುವ ಒಟ್ಟು ಸರ್ಕಾರಿ ಗೇಣಿ ಏಲಕ್ಕಿ ಮಲ್ಲೆಗಳ ಸಂಖ್ಯೆ ಎಷ್ಟು ? ಹಾಗೂ ಅವುಗಳ ವಿಸ್ತೀರ್ಣವೆಷ್ಟು ;